# ಕೈಮಗ್ಗ ಮತ್ತು ಜವಳಿ ಇಲಾಖೆಯಲ್ಲಿ ಮಹಿಳೆಯರಿಗಾಗಿ ಅನುಷ್ಠಾನಗೊಳಿಸುತ್ತಿರುವ ವಿವಿಧ ಅಭಿವೃದ್ಧಿ ಯೋಜನೆಗಳು

## 1) ವಸತಿ ಸಹಿತ ಕಾರ್ಯಾಗಾರ

ಕೈಮಗ್ಗ ಮತ್ತು ವಿದ್ಯುತ್‌ಮಗ್ಗ ನೇಕಾರರು ಸ್ವಂತ ಕಟ್ಟಡವಿಲ್ಲದೆ, ಜಾಗವನ್ನು ಹೊಂದಿದ್ದಲ್ಲಿ ಕನಿಷ್ಟ 4 ಚದುರಡಿ ವಸತಿ ಸಹಿತ ಕಾರ್ಯಾಗಾರವನ್ನು ನಿರ್ಮಿಸಲು ಅವಕಾಶವಿರುತ್ತದೆ. ಪ್ರತಿ ಘಟಕಕ್ಕೆ ರೂ.2.50ಲಕ್ಷಗಳ ವೆಚ್ಚ ಆಗುತ್ತಿದ್ದು, ಈ ಪೈಕಿ ಇಲಾಖೆಯಿಂದ ರೂ.1.00ಲಕ್ಷ ಸಹಾಯಧನ ಹಾಗೂ ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮದಿಂದ ರೂ.1.20ಲಕ್ಷ ಸಹಾಯಧನವನ್ನು ನೀಡಲಾಗುವುದು. ಉಳಿದ ರೂ.0.30ಲಕ್ಷ ಫಲಾನುಭವಿಗಳು ಭರಿಸತಕ್ಕದ್ದು. ಸದರಿ ಯೋಜನೆಯಡಿ ಜಾಗವು ಮಹಿಳಾ ಫಲಾನುಭವಿಗಳ ಹೆಸರಿಗೆ ನೋಂದಾಯಿಸಬೇಕಾಗಿದ್ದು ಹೆಚ್ಚಿನ ಸಂಖ್ಯೆಯಲ್ಲಿ ಮಹಿಳಾ ನೇಕಾರರಿಗೆ ಸೌಲಭ್ಯವನ್ನು ಒದಗಿಸಲಾಗುತ್ತಿದೆ. 2016–17ನೇ ಸಾಲಿನಲ್ಲಿ 1000 ವಸತಿ ಸಹಿತ ಕಾರ್ಯಾಗಾರಗಳನ್ನು ಒದಗಿಸಲಾಗಿದೆ.

## 2) ಕೌಶಲ್ಯಾಭಿವೃದ್ಧಿ ತರಬೇತಿ

ನಗರ ಮತ್ತು ಗ್ರಾಮೀಣ ಭಾಗದಲ್ಲಿ ನಿರುದ್ಯೋಗಿ ಯುವಕ /ಯುವತಿಯರಿಗೆ ಕೌಶಲ್ಯಾಭಿವೃದ್ಧಿ ತರಬೇತಿಯನ್ನು ಸೀವಿಂಗ್ ಮೆಷಿನ್ ಆಪರೇಟರ್,ಕೈಮಗ್ಗ ನೇಯ್ಗೆ, ವಿದ್ಯುತ್‌ಮಗ್ಗ ನೇಯ್ಗೆ ವೃತ್ತಿಯಲ್ಲಿ 45 ದಿನಗಳ ಅವಧಿಗೆ ನೀಡಲಾಗುವುದು. ತರಬೇತಿ ನಂತರ ಗಾರ್ಮೆಂಟ್ ಕೈಗಾರಿಕೆಗಳಲ್ಲಿ ಉದ್ಯೋಗವಕಾಶವನ್ನು ಒದಗಿಸಲಾಗುವುದು. ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರಿಗೆ ತರಬೇತಿಯನ್ನು ನೀಡಲಾಗುವುದು. ಪ್ರತಿ ಅಭ್ಯರ್ಥಿಗೆ ತರಬೇತಿ ಅವಧಿಯಲ್ಲಿ ರೂ.3,000/– ಶಿಷ್ಯವೇತನವನ್ನು ಒದಗಿಸಲಾಗುವುದು. 2016–17ನೇ ಸಾಲಿನಲ್ಲಿ ಒಟ್ಟಾರೆ ರೂ.15.00ಕೋಟಿ ಆಯವ್ಯಯದಲ್ಲಿ ಅಂದಾಜು ಶೇ.90ರಷ್ಟು ಮಹಿಳಾ ಫಲಾನುಭವಿಗಳಿಗೆ ತರಬೇತಿ ಒದಗಿಸಲಾಗಿದೆ.

## 3) ನೂತನ ಜವಳಿ ನೀತಿ ಯೋಜನೆಯಡಿ (2013–18) ಸೌಲಭ್ಯ :

ಕೈಮಗ್ಗ ಮತ್ತು ಜವಳಿ ಇಲಾಖೆಯಲ್ಲಿ ಅನುಷ್ಠಾನಗೊಳಿಸುತ್ತಿರುವ ನೂತನ ಜವಳಿ ನೀತಿ ಯೋಜನೆಯಡಿ ಹೊಸದಾಗಿ ಬಂಡವಾಳ ಹೂಡಿಕೆ ಮಾಡಿ ಸ್ಥಾಪಿಸಲಾದ ಜವಳಿ ಘಟಕಗಳಿಗೆ ಪ್ರೋತ್ಸಾಹನ ಮತ್ತು ರಿಯಾಯಿತಿಗಳನ್ನು ನೀಡಲಾಗುತ್ತಿದೆ. ಸದರಿ ಯೋಜನೆಯಡಿ ಮಹಿಳಾ ಕೈಗಾರಿಕೋದ್ಯಮಿಗಳಿಗೆ ಎಲ್ಲಾ ಹೊಸ ಘಟಕಗಳಿಗೆ ಶೇ.15 / 20 ರಷ್ಟು ನೀಡುವ ಸಹಾಯಧನದ ಜೊತೆಗೆ ಹೆಚ್ಚುವರಿಯಾಗಿ ಶೇ.5ರಷ್ಟು ಸಾಲಾಧಾರಿತ ಬಂಡವಾಳ ಸಹಾಯಧನವನ್ನು ನೀಡಲಾಗುವುದು. 2016–17ನೇ ಸಾಲಿಗೆ ನೂತನ ಜವಳಿ ನೀತಿ ಯೋಜನೆಯಡಿ 20 ಮಹಿಳಾ ಘಟಕಗಳನ್ನು ರೂ.168.00ಕೋಟಿ ಬಂಡವಾಳ ಹೂಡಿಕೆ ಮಾಡಿ ಸ್ಥಾಪಿಸಿದ್ದು 250 ಜನರಿಗೆ ಉದ್ಯೋಗವನ್ನು ಒದಗಿಸಲಾಗಿದೆ.  ಈ ಪೈಕಿ ಮಹಿಳಾ ಘಟಕಗಳ ಯಶೋಗಾಥೆಯನ್ನು ಅನುಬಂಧದಲ್ಲಿ ಒದಗಿಸಲಾಗಿದೆ.

# <u>ಅನುಬಂಧ</u>

**1) <u>ಬೆಳಗಾಂ ಜಿಲ್ಲೆ  ಘಟಕದ ಹೆಸರು : ಮೆ:ಕೋಮಲ ಟೆಕ್ಸ್‌ಟೈಲ್ಸ್.</u>**

- ಮಾಲೀಕರ ಹೆಸರು : ಶ್ರೀಮತಿ.ಕೋಮಲ ಪಿ.ಖರ್ಗೆ,ಪ್ಲಾಟ್ ನಂ.5/64,65,ಮಾಣಕಾಪುರ, ತಾ:ಚಿಕ್ಕೋಡಿ,ಬೆಳಗಾಂ ಜಿಲ್ಲೆ.ಇವರು ಮೂಲತ: ಅಡಿಕೆ ವ್ಯಾಪಾರಿ ಕುಟುಂಬದವರಾಗಿದ್ದು, ಹಲವಾರು ವರ್ಷಗಳಿಂದ ಈಚಲಕಾರಂಜಿಯಲ್ಲಿ ಅಡಿಕೆ ವ್ಯಾಪಾರದಲ್ಲಿ ತೊಡಗಿರುತ್ತಾರೆ.
- ಮಹಾರಾಷ್ಟ್ರ ರಾಜ್ಯದ ಈಚಲಕಾರಂಜಿಯು ಜವಳಿ ಉದ್ಯಮದಲ್ಲಿ ಮುಂಚೂಣಿಯಲ್ಲಿದ್ದು ಘಟಕದ ಮಾಲೀಕರಾದ ಶ್ರೀಮತಿ.ಕೋಮಲ ಪಿ.ಖರ್ಗೆಯವರು ನಮ್ಮ ಇಲಾಖೆಯಲ್ಲಿ ನೂತನ ಜವಳಿ ನೀತಿ ಯೋಜನೆಯಡಿಯಲ್ಲಿ ಉದ್ದಿಮೆದಾರರಿಗೆ ನೀಡುತ್ತಿರುವ ಪ್ರೋತ್ಸಾಹನ ಮತ್ತು ರಿಯಾಯತಿಗಳನ್ನು ಗಮನಿಸಿ ಆಕರ್ಷಿತರಾಗಿ ಈಚಲಕಾರಂಜಿ ಮಾರುಕಟ್ಟೆಗೆ ಸಮೀಪವಿರುವ ಚಿಕ್ಕೋಡಿ ತಾಲ್ಲೂಕಿನ ಮಾಣಕಾಪುರ ಗ್ರಾಮದಲ್ಲಿ 08 ಅತ್ಯಾಧುನಿಕ ರೇಪಿಯರ್ ಮಗ್ಗಗಳನ್ನು ಅಳವಡಿಸಿ ಉದ್ಯಮದಲ್ಲಿ ತೊಡಗಿರುತ್ತಾರೆ.
- ಘಟಕದ ಯೋಜನಾ ವೆಚ್ಚ ರೂ.61,37,677/–. ಈ ಪೈಕಿ ರೂ.35,60,760/–ಗಳನ್ನು ಸಾಲ ರೂಪದಲ್ಲಿ ಹಾಗೂ ರೂ.25,76,917/–ಗಳನ್ನು ಸ್ವಂತ ಬಂಡವಾಳವಾಗಿ ಹೂಡಿಕೆ ಮಾಡಿರುತ್ತಾರೆ.
- ಘಟಕದಲ್ಲಿ ಸ್ಥಳೀಯ 04 ಜನರಿಗೆ ಉದ್ಯೋಗವಕಾಶ ಕಲ್ಪಿಸಿರುತ್ತಾರೆ.
- ಕೈಮಗ್ಗ ಮತ್ತು ಜವಳಿ ಇಲಾಖೆಯಿಂದ ಈ ಘಟಕಕ್ಕೆ ಸಾಲಾಧರಿತ ಬಂಡವಾಳ ಸಹಾಯಧನ ರೂ.15,27,204/– ಮತ್ತು ಪ್ರವೇಶ ತೆರಿಗೆ ಮರುಸಂದಾಯ ರೂ.76,316/– ಒಟ್ಟು ರೂ.16,03,520/–ಗಳ ಸಹಾಯಧನ ಪಡೆದಿರುತ್ತಾರೆ.
- ಸದರಿ ಘಟಕವು ಆರ್ಥಿಕವಾಗಿ ತುಂಬಾ ಸಧೃಡವಾಗಿದ್ದು ಪ್ರತಿ ಮಾಸಿಕ ರೂ.1,00,000/– ದವರೆಗೆ ಲಾಭವನ್ನು ಪಡೆಯುತ್ತಿರುತ್ತಾರೆ.
- ಶ್ರೀಮತಿ.ಕೋಮಲ ಪಿ.ಖರ್ಗೆ ರವರು ಉತ್ತಮ ಮಹಿಳಾ ಉದ್ದಿಮೆದಾರರಾಗಿ ಹೊರಹೊಮ್ಮಿರುತ್ತಾರೆ.



**<u>ಘಟಕದ ಹೆಸರು : ಮೆ:ಸದ್ಗುರು ಟೆಕ್ಸ್‌ಟೈಲ್ಸ್</u>**

- ಮಾಲೀಕರ ಹೆಸರು : ಶ್ರೀಮತಿ.ಶೋಭಾ ಬೋಸ್ಲೆ,ಪ್ಲಾಟ್ ನಂ.5 ನಿಪ್ಪಾಣಿ ಕೋ–ಅಪರೇಟಿವ್ ಇಂಡಸ್ಟ್ರಿಯಲ್ ಎಸ್ಟೇಟ್ ಲಿ., ನಿಪ್ಪಾಣಿ,ತಾ:ಚಿಕ್ಕೋಡಿ,ಬೆಳಗಾಂ ಜಿಲ್ಲೆ.ಇವರು ಮೂಲತ: ತಂಬಾಕು ಬೆಳೆಗಾರರ ಕುಟುಂಬದವರಾಗಿರುತ್ತಾರೆ.

......2

- ಸದರಿಯವರು ರಾಜ್ಯ ಸರ್ಕಾರದ ಕೈಮಗ್ಗ ಮತ್ತು ಜವಳಿ ಇಲಾಖೆಯಲ್ಲಿ ನೂತನ ಜವಳಿ ನೀತಿ ಯೋಜನೆಯಡಿಯಲ್ಲಿ ಅನುಷ್ಠಾನಗೊಳಿಸುತ್ತಿರುವ ಉದ್ದಿಮೆದಾರರಿಗೆ ನೀಡುತ್ತಿರುವ ಪ್ರೋತ್ಸಾಹನ ಮತ್ತು ರಿಯಾಯತಿಗಳನ್ನು ಸ್ಥಳೀಯ ಕಚೇರಿ ಮೂಲಕ ಮಾಹಿತಿ ಪಡೆದು ಪ್ರಭಾವಿತರಾಗಿ ಸ್ವತ: ಬಂಡವಾಳ ಹೂಡಿಕೆ ಮಾಡಿ ಸ್ಥಳೀಯರಿಗೆ 09 ಜನರಿಗೆ ಉದ್ಯೋಗ ಒದಗಿಸಿರುತ್ತಾರೆ.
- ಘಟಕದ ಯೋಜನಾ ವೆಚ್ಚ ರೂ.90,93,350/–. ಈ ಪೈಕಿ ರೂ.66,57,000/–ಗಳನ್ನು ಬ್ಯಾಂಕ್ ಮುಖಾಂತರ ಸಾಲ ಪಡೆದು ಉಳಿದರೂ.24,36,350/–ಗಳನ್ನು ಸ್ವಂತ ಬಂಡವಾಳವಾಗಿ ಹೂಡಿಕೆ ಮಾಡಿರುತ್ತಾರೆ.
- ಕೈಮಗ್ಗ ಮತ್ತು ಜವಳಿ ಇಲಾಖೆಯಿಂದ ಈ ಘಟಕಕ್ಕೆ ಸಾಲಾಧಾರಿತ ಬಂಡವಾಳ ಸಹಾಯಧನ ರೂ.27,73,337/– ಮತ್ತು ಪ್ರವೇಶ ತೆರಿಗೆ ಮರುಸಂದಾಯ ರೂ.1,32,912/– ಹಾಗೂ ಮುದ್ರಾಂಕ ಶುಲ್ಕ ರೂ.33,780/– ಒಟ್ಟು ರೂ.24,44,029/–ಗಳ ಸಹಾಯಧನ ಪಡೆದಿರುತ್ತಾರೆ.
- ಸದರಿ ಘಟಕವು ಯಶಸ್ವಿ ಮಹಿಳಾ ಉದ್ದಿಮೆದಾರ ಘಟಕವಾಗಿ ಹೊರಹೊಮ್ಮಿ ಕಾರ್ಯ ನಿರ್ವಹಿಸುತ್ತಿದೆ.





2) <u>ಬಾಗಲಕೋಟೆ ಜಿಲ್ಲೆ</u>

- **<u>ಘಟಕದ ಹೆಸರು</u>** : ಮೆ:ಹೊನ್ನಾಂಬಾ ಪವರ್‌ಲೂಮ್ ಇಂಡಸ್ಟ್ರೀಜ್, ಸಾ:, ತಾ:ಬಾದಾಮಿ, ಜಿಲ್ಲೆ ಬಾಗಲಕೋಟೆ. ಘಟಕದ ಮಾಲೀಕರಾದ ಶ್ರೀಮತಿ.ನೀಲವ್ವ ಮೇಘರಾಜ ಮುಳಗುಂದ ಇವರು ಮೂಲತ: ಗುಳೇದಗುಡ್ಡ ಖಣಗಳನ್ನು ಉತ್ಪಾದಿಸುವ ಕೈಮಗ್ಗ ನೇಕಾರರಾಗಿದ್ದು, ಈಗ ಇವರು ಕೈಮಗ್ಗ ವೃತ್ತಿಯಿಂದ ವಿದ್ಯುತ್‌ಮಗ್ಗ ವೃತ್ತಿಗೆ ಬದಲಾವಣೆಗೊಳ್ಳಲು ಇಲಾಖೆಯಿಂದ ನೀಡುತ್ತಿರುವ ಯೋಜನೆಗಳ ಬಗ್ಗೆ ಮಾಹಿತಿ ಪಡೆದು 16 ವಿದ್ಯುತ್ ಮಗ್ಗ ಘಟಕ ಸ್ಥಾಪಿಸಿರುತ್ತಾರೆ. ಕೆ.ವಿ.ಜಿ ಬ್ಯಾಂಕ್,ಗುಳೇದಗುಡ್ಡದಲ್ಲಿ ರೂ.40,30,000/–ಗಳ ಸಾಲ ಹಾಗೂ ರೂ.22,79,080/–ಗಳ ಸ್ವಂತ ವಂತಿಕೆ ಸೇರಿ ಹೀಗೆ ಒಟ್ಟು ರೂ.63,09,080/–ಗಳ ಬಂಡವಾಳ ಹೂಡಿಕೆ ಮಾಡಿರುತ್ತಾರೆ ಪರ್ವತಿ ಗ್ರಾಮದಲ್ಲಿರುವ ಸ್ವಂತ ಖಾಲಿ ಜಾಗೆಯಲ್ಲಿ ರೂ.36,75,000/–ಗಳ ವೆಚ್ಚದಲ್ಲಿ ಕಟ್ಟಡ ನಿರ್ಮಾಣ ಮಾಡಿ ಅದರಲ್ಲಿ ರೂ.26,34,080/–ಗಳ ಯಂತ್ರೋಪಕರಣಗಳನ್ನು ಖರೀದಿಸಿ ಅಳವಡಿಸಿ ಉತ್ಪಾದನೆ ಪ್ರಾರಂಭಿಸಿರುತ್ತಾರೆ ಹಾಗೂ ಇಲಾಖೆಯಿಂದ ನೂತನ ಜವಳಿ ನೀತಿ 2013–18ರ ಯೋಜನೆಯಡಿ ಸಾಲಾಧಾರಿತ ಬಂಡವಾಳ ಹೂಡಿಕೆ ಸಹಾಯಧನವಾಗಿ ರೂ.6,30,908/–ಬಡ್ಡಿ ಸಹಾಯಧನವಾಗಿ ರೂ.6,30,908/– ಹಾಗೂ ಮಹಿಳಾ ಅಭ್ಯರ್ಥಿಯಾಗಿರುವುದರಿಂದ ಹೆಚ್ಚುವರಿಯಾಗಿ ರೂ.3,15,454/– ಹೀಗೆ ಒಟ್ಟು ರೂ.15,77,270/–ಗಳ ಸಹಾಯಧನ

......3

- ಪಡೆದಿರುತ್ತಾರೆ. ಇವರ ಮಾಸಿಕ ವರಮಾನ ಮೊದಲು 04 ಕೈಮಗ್ಗಗಳಿಂದ ರೂ.12,000/–ಗಳಿದ್ದು, ಈಗ ಪ್ರಸಕ್ತ 16 ವಿದ್ಯುತ್ ಮಗ್ಗಗಳಿಂದ ಮಾಸಿಕ ರೂ.32,000/–ಗಳ ವರಮಾನವನ್ನು ಗಳಿಸುತ್ತಿದ್ದಾರೆ. ಸ್ವಂತ ಉದ್ಯಮಿಯಾಗುವ ಮೂಲಕ ಸ್ಥಳೀಯವಾಗಿ 20 ಜನ ನಿರುದ್ಯೋಗಿಗಳಿಗೆ ಉದ್ಯೋಗ ನೀಡಿ ಕಾಟನ್ ಸೀರೆ ಹಾಗೂ ಖಣಗಳನ್ನು ಉತ್ಪಾದಿಸುತ್ತಿದ್ದಾರೆ. ಇಲಾಖೆಯಿಂದ ಸೌಲಭ್ಯವನ್ನು ಪಡೆದು ಸ್ವಂತ ಘಟಕ ಸ್ಥಾಪಿಸಿ ಕಾರ್ಯ ನಿರ್ವಹಿಸುತ್ತಿರುವುದರಿಂದ ಹೆಮ್ಮೆ ಪಡುತ್ತಿದ್ದು ಯಶಸ್ವಿ ಮಹಿಳೆಯಾಗಿ ಹೊರಹೊಮ್ಮಿದ್ದಾರೆ.




- **<u>ಘಟಕದ ಹೆಸರು</u>** : ಮೆ:ಶ್ರೀ.ಮಾರುತಿ ಪವರ್‌ಲೂಮ್, ಸಾ:ಇಳಕಲ್, ತಾ:ಹುನಗುಂದ, ಜಿಲ್ಲೆ ಬಾಗಲಕೋಟೆ. ಘಟಕದ ಮಾಲೀಕರಾದ ಶ್ರೀಮತಿ.ಪಾರ್ವತಿ ಡಿ.ಹೊಂಗಲ್ ಇವರು ಮೂಲತ: ಕೈಮಗ್ಗ ನೇಕಾರರಾಗಿದ್ದು, ಈಗ ಇವರು ಕೈಮಗ್ಗ ವೃತ್ತಿಯಿಂದ ವಿದ್ಯುತ್‌ಮಗ್ಗ ವೃತ್ತಿಗೆ ಬದಲಾವಣೆಗೊಳ್ಳಲು ಇಲಾಖೆಯಿಂದ ನೀಡುತ್ತಿರುವ ಯೋಜನೆಗಳ ಬಗ್ಗೆ ಮಾಹಿತಿ ಪಡೆದು 04 ವಿದ್ಯುತ್ ಮಗ್ಗ ಘಟಕ ಸ್ಥಾಪಿಸಿರುತ್ತಾರೆ. ಈ ಘಟಕಕ್ಕೆ ಒಟ್ಟು ಬಂಡವಾಳ ಹೂಡಿಕೆ ರೂ.4,67,481/– ಈ ಪೈಕಿ ರೂ.3,30,000/–ಗಳನ್ನು ಇಳಕಲ್ ಕೋ–ಆಪರೇಟಿವ್ ಬ್ಯಾಂಕಿನಿಂದ ಸಾಲ ಪಡೆದು ಉಳಿದ ರೂ.1,37,481/–ಗಳನ್ನು ಸ್ವಂತ ಬಂಡವಾಳವಾಗಿ ಹೂಡಿಕೆ ಮಾಡಿರುತ್ತಾರೆ. ಈ ಹೂಡಿಕೆಗೆ ಇಲಾಖೆಯಿಂದ ಬಂಡವಾಳ ಹೂಡಿಕೆ ಸಹಾಯಧನವಾಗಿ ರೂ.35,061/– ಹಾಗೂ ಮಹಿಳಾ ಅಭ್ಯರ್ಥಿಯಾಗಿರುವುದರಿಂದ ಹೆಚ್ಚುವರಿಯಾಗಿ ಶೇ.5ರಂತೆ ರೂ.23,374/–ಗಳನ್ನು ಒಟ್ಟು ರೂ.93,496/–ಗಳ ಸಹಾಯಧನವಾಗಿ ಇಲಾಖೆಯಿಂದ ನೀಡಲಾಗಿರುತ್ತದೆ. ಇವರ ಘಟಕದಿಂದ ಮಾಸಿಕ ವರಮಾನ ರೂ.32,000/–ಗಳಿಸುತ್ತಿದ್ದಾರೆ. ಇಲಾಖೆಯಿಂದ ಸೌಲಭ್ಯವನ್ನು ಪಡೆದು ಸ್ವಂತ ಘಟಕ ಸ್ಥಾಪಿಸಿ ಕಾರ್ಯ ನಿರ್ವಹಿಸುತ್ತಿರುವುದರಿಂದ ಹೆಮ್ಮೆ ಪಡುತ್ತಿರುತ್ತಾರೆ.







**3) <u>ಚಿಕ್ಕಬಳ್ಳಾಪುರ</u>**

- **<u>ಘಟಕದ ಹೆಸರು</u>** : ಮೆ:ಮಹೇಶ್ ಪವರ್‌ಲೂಮ ಇಂಡಸ್ಟ್ರಿ ಲಿ.,ಬೈಯಪ್ಪನಹಳ್ಳಿ, ಶಿಡ್ಲಘಟ್ಟ ತಾ: ಚಿಕ್ಕಬಳ್ಳಾಪುರ ಜಿಲ್ಲೆ. ಶ್ರೀಮತಿ ಸಿ.ಸುಜಾತ ಇವರು ದಿ:11–03–1982ರಂದು ಚೌಡಪ್ಪ ಮತ್ತು ಸುಶೀಲಮ್ಮ ದಂಪತಿಗಳ ಮಗಳಾಗಿ ಜನಿಸಿರುತ್ತಾರೆ. ಸದರಿಯವರು ವಿದ್ಯುತ್‌ಮಗ್ಗ ನೇಕಾರರಾಗಿದ್ದು, ಸುಮಾರು ರೂ.30,00,000/– ಬಂಡವಾಳ ಹೂಡಿಕೆ ಮಾಡಿ ಘಟಕ ಸ್ಥಾಪಿಸಿರುತ್ತಾರೆ. ಕೈಮಗ್ಗ ಮತ್ತು ಜವಳಿ ಇಲಾಖೆಯಿಂದ ವಿವಿಧ ಸೌಲಭ್ಯಗಳಡಿಯಲ್ಲಿ ಸಹಾಯಧನ ಪಡೆದಿರುತ್ತಾರೆ. ಸದರಿಯವರು 04 ಮಹಿಳೆಯವರು ಹಾಗೂ 8 ಪುರಷರು ಒಟ್ಟು 12 ಜನರಿಗೆ ಉದ್ಯೋಗವಕಾಶ ನೀಡಿರುತ್ತಾರೆ. ಸದರಿ ಘಟಕಕ್ಕೆ ಇಲಾಖೆಯಿಂದ ಒಟ್ಟು ರೂ.7,50,000/– ಸಹಾಯಧನ ಮಂಜೂರು ಮಾಡಲಾಗಿರುತ್ತದೆ. ಈ ಘಟಕವು ಒಟ್ಟು ರೂ.20,00,000/–ಗಳ ವಾರ್ಷಿಇ ವಹಿವಾಟು ನಡೆಸಿ ಕಾರ್ಯ ನಿರ್ವಹಿಸುತ್ತಿದೆ.





